'ಓ ದೇವರೇ! ನಾನು' – ಅವನಿಗೆ ಇದ್ದಕ್ಕಿದ್ದಂತೆ ಗೊತ್ತಾಯಿತು, ಅವರು ಒಬ್ಬರಿಂದ ಇನ್ನೊಬ್ಬರು ಎರಡು ಅಡಿ ಅಂತರದಲ್ಲಿ ಮಾತ್ರ ನಿಂತುಕೊಂಡಿದ್ದರು. ಅವನು ಈಗ ಅಂದರೆ ವರ್ತಮಾನದಲ್ಲಿ ಅವಳನ್ನು ಪ್ರೀತಿಸುತ್ತಿದ್ದಾನೆ ಎಂಬಂತೆ ಮಾತಾಡುತ್ತಿದ್ದನು. ಅವಳು ತನ್ನ ತುಟಿಗಳನ್ನು ಅರ್ಧ ತೆರೆದುಕೊಂಡು ಅವನೆಡೆ ನೋಡುತ್ತಿದ್ದಳು. ಅವಳ ಕಣ್ಣುಗಳಲ್ಲಿ ಮೋಡ ಮುಸುಕಿದ ನೋಟವಿತ್ತು.

'ಮುಂದುವರಿಸು,' ಅವಳು ಹೇಳಿದಳು, 'ನನಗೆ ಹೇಳಲು ನಾಚಿಕೆಯಾಗುತ್ತೆ – ನಾನು ಅದನ್ನು ಇಷ್ಟಪಡ್ತೀನಿ. ನೀನು ಅಷ್ಟೊಂದು ತಲೆಕೆಡಿಸಿಕೊಂಡಿದ್ದೆ ಎಂದು ನನಗೆ ಗೊತ್ತಿರಲಿಲ್ಲ; ಆಗ, ನಾನು ಅಂದುಕೊಂಡಿದ್ದೆ ನಾನೇ ತಲೆಕೆಡಿಸಿಕೊಂಡಿದ್ದೆ ಎಂದು'.

'ನೀನು!' ಅವನು ಉದ್ಗಾರ ಮಾಡಿದನು. 'ಆ ಔಷಧಾಲಯದ ಹತ್ತಿರ ನನ್ನನ್ನು ದೂರ ತಳ್ಳಿದ್ದು ನಿನಗೆ ನೆನಪಿಲ್ಲವೇ.' ಅವನು ನಕ್ಕನು. 'ನನ್ನ ವಿಷಯದಲ್ಲಿ ನಿನ್ನ ನಾಲಗೆಯನ್ನು ಪಟ್ಟುಹಿಡಿದು ಕಚ್ಚಿಕೊಂಡಿದ್ದೆ ನೀನು.'

'ನನಗದೆಲ್ಲಾ ನೆನಪೇ ಇಲ್ಲ. ನನಗನ್ನಿಸಿತ್ತು ನೀನೇ ಹೋಗಿಬಿಟ್ಟಿದ್ದೆ ಎಂದು,' ಅವಳ ಕೈ ಹಗುರವಾಗಿ ನಿಧಾನವಾಗಿ ಸಮಾಧಾನಪಡಿಸುವಂತೆ ಅವನ ತೋಳುಗಳ ಮೇಲೆ ಇಳಿಯಿತು. 'ನನ್ನ ಹತ್ತಿರ ಮಹಡಿಯಲ್ಲಿ ಒಂದು ಫೋಟೊ ಆಲ್ಬಂ ಇದೆ. ಅದನ್ನು ಬಹಳ ವರ್ಷಗಳಿಂದ ನೋಡೇ ಇಲ್ಲ. ಅದನ್ನು ಹುಡುಕಿ ತೆಗೆಯುತ್ತೇನೆ.'

ಎರಡು ರೀತಿಯ ಯೋಚನೆಗಳೊಂದಿಗೆ ಡೊನಾಲ್ಡ್ ಐದು ನಿಮಿಷ ಕುಳಿತ. ಎರಡು ವಿಭಿನ್ನ ವ್ಯಕ್ತಿಗಳು ಒಂದೇ ಘಟನೆಯ ಬಗ್ಗೆ ಏನು ನೆನಪಿಟ್ಟುಕೊಂಡಿದ್ದಾರೆ ಎಂಬುದನ್ನು ಸಮನ್ವಯಮಾಡಿಕೊಳ್ಳುವ ನಿರಾಶಾದಾಯಕವಾದ ಅಸಾಧ್ಯತೆ ಕುರಿತು ಮತ್ತು ಎರಡನೆಯದಾಗಿ ಒಬ್ಬ ಹೆಂಗಸಾಗಿ ನ್ಯಾನ್ಸಿ ಅವನನ್ನು ದಿಗಿಲುಗೊಳಿಸಿದ ರೀತಿ ಅವನನ್ನು ಒಂದು ಮಗುವನ್ನು ಕಲಕಿದಂತೆ ಕಲಕಿದ್ದು. ಅವನ ಹೆಂಡತಿಯ ಮರಣಾನಂತರ ಅವನು ಈ ರೀತಿ ಅರ್ಧ ಗಂಟೆಗಳ ಕಾಲ ಭಾವಪರವಶನಾದುದು ಅವನ ಅರಿವಿಗೆ ಬಂದೇ ಇರಲಿಲ್ಲ. ಇಲ್ಲವೇ ಇಲ್ಲ ಎನ್ನಬಹುದು. ಅದನ್ನು ಪುನಃ ಅನುಭವಿಸಲು ಅವನು ಬಯಸಿರಲಿಲ್ಲ.

ಒರಗುಮಂಚದಲ್ಲಿ ಅಕ್ಕಪಕ್ಕದಲ್ಲಿ ಕುಳಿತು ನಡುವೆ ಫೋಟೊ ಆಲ್ಬಂ ಅನ್ನು ತೆರೆದರು. ನ್ಯಾನ್ಸಿ ಅವನೆಡೆ ನಗುತ್ತಾ ನೋಡುತ್ತಿದ್ದಳು ಮತ್ತು ಬಹಳ ಖುಷಿಯಾಗಿದ್ದಳು.

'ಓಹ್, ಇದು ಬಹಳ ಮೋಜಿನ ಅನುಭವ,' ಅವಳು ಹೇಳಿದಳು. 'ಬಹಳ ತಮಾಷೆ ಎಂದರೆ ನೀನು ಬಹಳ ಸ್ನೇಹದಿಂದ ಕೂಡಿದ ವ್ಯಕ್ತಿಯಾಗಿದೀಯಾ, ನೀನು ಎಷ್ಟು ಸುಮಧುರವಾಗಿ ನನ್ನನ್ನು ನೆನಪಿನಲ್ಲಿಟ್ಟುಕೊಂಡಿದ್ದೀಯಾ... ನಾನು ಹೇಳ್ತೀನಿ ಕೇಳು, ನನಗೆ ಈಗ ಆಸೆಯಾಗ್ತಿದೆ, ಇದು ನನಗೆ ಆಗಲೇ ಗೊತ್ತಾಗಬೇಕಾಗಿತ್ತು! ನೀನು ಹೊರಟುಹೋದ ನಂತರ ನಾನು ನಿನ್ನನ್ನು ತುಂಬಾ ದ್ವೇಷಿಸಿದ್ದೆ.'

'ಹೌದಾ ಛೇ ಪಾಪ,' ಅವನು ಬಹಳ ಸೌಮ್ಯವಾಗಿ ಹೇಳಿದನು.

'ಆದರೆ ಈಗ ಅಲ್ಲ,' ಅವಳು ಪುನಃ ಒತ್ತಿ ಹೇಳಿದಳು, ಮತ್ತು ಸಹಜವಾಗಿ ಹಿಂದೆ ಮುಂದೆ ಯೋಚಿಸದೆ ಹೇಳಿದಳು, 'ನನ್ನನ್ನು ಮುತ್ತಿಡು. ಈಗ ಅದನ್ನೆಲ್ಲಾ ಸರಿಮಾಡೋಣ'.

'ಅದು ಒಳ್ಳೆಯ ಹೆಂಡತಿಯ ಲಕ್ಷಣವಲ್ಲ,' ಅವಳು ಒಂದು ನಿಮಿಷದ ನಂತರ ಹೇಳಿದಳು. ನನಗನ್ನಿಸುತ್ತೆ ನಾನು ಮದುವೆಯಾದಾಗಿನಿಂದ ಇಬ್ಬರು ಗಂಡಸರನ್ನು ನಿಜವಾಗಿಯೂ ಚುಂಬಿಸಿಲ್ಲ.'